ಬರುವ ವಿಪರೀತವಾದ ಯಾತನೆ, ವಾಂತಿ ಬಂದ ಹಾಗೆ ಆಗುತ್ತಿತ್ತು. ಚಳಿಗಾಲ ಮತ್ತು ಮಳೆಗಾಲದಲ್ಲಿ ಹಿತ್ತಲ ಜಗುಲಿಯ ಮೇಲೆ ಹರಿದ ಚಾಪೆಯನ್ನು ಹಾಸಿಕೊಂಡು ಅಮ್ಮನ ಹಳೆಯ ಒಂದು ಸೀರೆಯನ್ನು ಹೊದೆಯುತ್ತಾ ಮಲಗುವಾಗ ಮೊದಮೊದಲು ಅವಳಿಗೆ ಅಳು ಬರುತ್ತಿತ್ತು. ಯಾಕಾದರೂ ನಾನು ಹೆಣ್ಣಾಗಿ ಹುಟ್ಟಿದೆ ಎಂದು ಅನಿಸುತ್ತಿತ್ತು. ಒಂದು ದಿನ ಕನ್ನಡ ಮೇಷ್ಟ್ರು ಶಾಲೆಯಲ್ಲಿ 'ಪೆಣ್ಣಾಗಿ ಪುಟ್ಟಿದೆನ್ನಯ ದೋಷಂ' ಎಂಬ ಪದ್ಯವನ್ನು ಪಾಠ ಮಾಡಿದಾಗ ಕಾತ್ಯಾಯಿನಿಯ ಕಣ್ಣಿನ ಅಂಚಲ್ಲಿ ಸಣ್ಣನೆ ನೀರು ಜಿನುಗಿತ್ತು. ಅದನ್ನು ಗೊತ್ತಾಗದಂತೆ ಮೆಲ್ಲನೆ ಲಂಗದ ತುದಿಯಲ್ಲಿ ಒರೆಸಿಕೊಂಡವಳು ಮತ್ತೆಮತ್ತೆ ಅದನ್ನೇ ನೆನಪು ಮಾಡಿಕೊಳ್ಳುತ್ತಾಳೆ. ಯಾವ ಘಳಿಗೆಯಲ್ಲಿ ಕನ್ನಡ ಪಂಡಿತರು ಅಷ್ಟು ಚೆನ್ನಾಗಿ ಆ ಪಾಠವನ್ನು ಮಾಡಿದರೋ ಗೊತ್ತಿಲ್ಲ. ಅದು ನಿತ್ಯವೂ, ಪ್ರತಿ ತಿಂಗಳೂ ಅವಳನ್ನು ಕಾಡುತ್ತದೆ. ಹೆಣ್ಣಾಗಿ ಹುಟ್ಟಿದ್ದನ್ನು ದೋಷ ಎಂದು ಯಾಕೆ ಪರಿಗಣಿಸಬೇಕು ಎನ್ನುವುದು ಸುಳಿಯ ತೊಡಗಿದ್ದು ಬಿ.ಎ.ಯಲ್ಲಿ ಇರುವಾಗ. ಮಲೆಯಾಳಿ ಇಂಗ್ಲಿಷ್ ಲೆಕ್ಚರರ್ ಜೋಸೆಫ್, ಲೇಡಿ ಮ್ಯಾಕ್‌ಬೆತ್ ಕುರಿತು ಹೇಳುವಾಗ ಲೇಡಿ ಮ್ಯಾಕ್‌ಬೆತ್ ಸರಿ ಎಂದು ಅನಿಸತೊಡಗಿತ್ತು. ಮಾತೆತ್ತಿದರೆ ಪಂಚಾಂಗ ಬಿಡಿಸುವ ತಂದೆ, ಪ್ರತಿತಿಂಗಳೂ ಸತ್ಯನಾರಾಯಣ ಪೂಜೆಯ ದಿನ ಮಡಿಮೈಲಿಗೆಯನ್ನು ಆಚರಿಸುವ ಅಮ್ಮ. ಅಪ್ಪಟ ವ್ರತನಿಷ್ಠೆಯನ್ನು ಪ್ರದರ್ಶಿಸುವ ಥೇಟ್ ಹವ್ಯಕ ಹೆಂಗಸು ತಾಯಿ– ತಿಥಿಗೆ ಬರುವ ಡೊಳ್ಳು ಹೊಟ್ಟೆಯ ಅರವತ್ತು ವರ್ಷದ ಶಂಕರನಾರಾಯಣ ಭಟ್ಟರಿಗೆ ಲೇಡಿ ಮ್ಯಾಕ್‌ಬೆತ್ ಏನು, 'ಪೆಣ್ಣಾಗಿ ಪುಟ್ಟಿದೆನ್ನಯ ದೋಷಂ' ಪದ್ಯವೂ ನೆನಪಿಗೆ ಬರುವುದು ಸಾಧ್ಯವಿರಲಿಲ್ಲ. ಇದೇ ಅಂತ ಕಾಣಿಸುತ್ತದೆ ಕಾತ್ಯಾಯಿನಿಯ ಹಟವನ್ನು ಹೆಚ್ಚಿಸಲು ಕಾರಣವಾದ್ದು. ಆವಾಗಲೇ ಅವಳು ಈಜಲು ಕಲಿತದ್ದು. ತೋಟದ ಕೆರೆಯಲ್ಲಿ ಚೋಮನ ಸಹಾಯದಿಂದ ಈಜು ಕಲಿಯಲು ಶುರು ಮಾಡಿದಳು. ಅವನೂ ಹೇಳಿಕೊಟ್ಟ. ಕಲಿಸಿಕೊಡುವಾಗ ಅವನ ಕೈ ತನ್ನ ಎದೆಯ ಮೇಲೆ ಹರಿದಾಡಿದಾಗ ಮಾತ್ರ ಯಾಕೋ ಅಸಹ್ಯವಾಗತೊಡಗಿತು. ಬೀಡಿ ಸೇದಿದ ಅವನ ಬಾಯಿಯ ವಾಸನೆ, ಅವನ ಗಟ್ಟಿಯಾದ ಕೈಗಳು ತನ್ನ ಎದೆಯನ್ನು ಹಿಂಡಿದ್ದು ಅವಳಿಗೆ ಹಿಡಿಸಲಿಲ್ಲ. ಅವನಿಂದ ಬಿಡಿಸಿಕೊಳ್ಳತೊಡಗಿದಳು. ಗಟ್ಟಿಯಾಗಿ ಹಿಸುಕಿಬಿಟ್ಟದ್ದ. ಹಿಂಬದಿಯಿಂದ ತನ್ನನ್ನು ನೀರಲ್ಲಿ ಅಪ್ಪಿಕೊಂಡಿದ್ದ. ಅವನ ತುಂಡು ಪಂಚೆಯು ಎಲ್ಲಿಯೋ ಹೋಗಿತ್ತು. ಅವನು ಉದ್ರಿಕ್ತನಾಗಿ ಮತ್ತೆಮತ್ತೆ ಅದನ್ನೇ ಮಾಡುವಾಗ ಅವಳಿಗೆ ಅದು ಬೇಡವೆಂದು ಅನಿಸಿಕೊಂಡು ಕೆಲವು ದಿನ ಈಜು ಕಲಿಯುವುದನ್ನು ಬಿಟ್ಟಳು. ಅವನ ಸಹಾಯವಿಲ್ಲದೆ ಈಜಬೇಕೆಂದು ಎರಡು ಒಣ ತೆಂಗಿನಕಾಯಿಯನ್ನು ಪರಸ್ಪರ ಕಟ್ಟಿ ಬೇಸಿಗೆಯಲ್ಲಿ ಹೆಚ್ಚು ನೀರಿಲ್ಲದ ಹೊಳೆಯಲ್ಲಿ ಈಜು ಕಲಿತಳು. ಆಗಲೇ ಅವಳಿಗೆ ತಿಳಿದದ್ದು- ಹೊಳೆಯಲ್ಲಿ ಈಜುವ ಗಮ್ಮತ್ತು ಬೇರೆ. ಅದೂ ಯಾರ ಸಹಾಯವೂ ಇಲ್ಲದೆ. ಹರಿಯುವ ನೀರಿನಲ್ಲಿ ಈಜಬೇಕು - ನಿಂತ ನೀರಿನಲ್ಲಿ ಅಲ್ಲ ಎನ್ನುವುದು ನಿಧಾನವಾಗಿ ಅವಳ ಅರಿವಿಗೆ ಬಂತು. ಅದು ಜೀವನದಲ್ಲಿ ಒಂದು ಭಾಗವಾಗುತ್ತದೆ ಎಂದು ಆಗ ಗೊತ್ತಿರಲಿಲ್ಲ. ಬಿಳಿಯ ಲಂಗವನ್ನು ಹಾಕಿಕೊಂಡು ಒಬ್ಬಳೇ ಈಜುವುದು ಅಂದರೆ ಖುಷಿ. ಅದರಲ್ಲಿ ತನ್ನ ಮೈ ಕಾಣುತ್ತದೆ. ತನಗೆ ಮಾತ್ರವೇ. ತನ್ನ ಮೈಯನ್ನು ಮುಟ್ಟುವುದು ತಾನೇ ಎನ್ನುವುದು, ಎದೆಯ ಭಾಗಕ್ಕೆ ತೆಂಗಿನಕಾಯಿಯ ಹಗ್ಗ ಯಾರೋ ನಿಧಾನವಾಗಿ ಮುಟ್ಟಿದ ಹಾಗೆ ಕಾಣುತ್ತಿತ್ತು. ತನ್ನ ಎದೆಯನ್ನು ತಾನು ಮುಟ್ಟಿಕೊಳ್ಳುವುದು, ತನ್ನನ್ನು ತಾನು ಪ್ರೀತಿಸುವುದು ಶುರುವಾಯಿತು. ಕಾತ್ಯಾಯಿನಿಯ ಮನಸ್ಸು ಹೀಗಿದೆ ಎಂದು ಹುಟ್ಟಿಸಿದ ತಂದೆಗೆ ಗೊತ್ತಿಲ್ಲ. ಮಡಿಮೈಲಿಗೆಯಲ್ಲಿ ಜೀವನದ ಸಾರ್ಥಕತೆಯನ್ನು

